# ಪ್ರಜಾಪ್ರಭುತ್ವದ ಸವಾಲುಗಳು

ಏಪ್ರಿಲ್, 14 ಅಂಬೇಡ್ಕರ್ ಹುಟ್ಟುಹಬ್ಬವನ್ನು ಆಚರಿಸುವಾಗ ಪ್ರಜಾಪ್ರಭುತ್ವದ ಸವಾಲುಗಳನ್ನು ಕುರಿತು ಚರ್ಚಿಸುವುದು ಅನಿವಾರ್ಯ. ‘ಒಬ್ಬ ವ್ಯಕ್ತಿ, ಒಂದು ಮತ, ಒಂದು ಮೌಲ್ಯ’ ಎಂಬುದು ಪ್ರಜಾಪ್ರಭುತ್ವದ ತತ್ವ. ಈ ಹಕ್ಕನ್ನು ಮಹಿಳೆರಾದಿಯಾಗಿ ಕಟ್ಟಕಡೆಯ ವ್ಯಕ್ತಿಗೂ ವಿಸ್ತರಿಸಿದ ಕೀರ್ತಿ ಸಂವಿಧಾನ ರಚನಾಕಾರರಿಗೆ ಸಲ್ಲುತ್ತದೆ. ಪ್ರಜಾಪ್ರಭುತ್ವದ ಬುನಾದಿ ಚುನಾವಣೆ. ಪ್ರತಿ ಐದು ವರ್ಷಗಳಿಗೊಮ್ಮೆ ಅದು ನಡೆಯುವುದು ಪಕ್ಷದ ಮೇಲಿನ ಪ್ರಜೆಗಳ ನಂಬಿಕೆಯನ್ನು ನವೀಕರಿಸುವ ಅಥವಾ ಬದಲಾಯಿಸುವ ಪ್ರಕ್ರಿಯೆ. ಅದರಲ್ಲಿ ಬಡವ, ಶ್ರೀಮಂತ, ವ್ಯಾಪಾರಿ, ಅಧಿಕಾರಿ, ರಾಜಕಾರಿಣಿ, ಕಾಳದಂಧೆಕೋರ ಎಲ್ಲರೂ ತಮ್ಮ ತಮ್ಮ ಮತ ಚಲಾಯಿಸುತ್ತಾರೆ. ಭಾರತದ ಸಂದರ್ಭದಲ್ಲಿ ಡೆಮಾಕ್ರಸಿ ಅಷ್ಟು ಸುಲಭವಾಗಿ ಒಗ್ಗುವಂಥದ್ದಲ್ಲ ಎಂದು ಕಳೆದ ಎಪ್ಪತ್ತು ವರ್ಷಗಳ ಅನುಭವದಲ್ಲಿ ನಮಗೆ ತಿಳಿದಿದೆ. ಜೇಮ್ಸ್ ಬೋವರ್ಡ್ ಹೇಳುವಂತೆ ಎರಡು ತೋಳಗಳು ಮತ್ತು ಒಂದು ಕುರಿಮರಿ ಸೇರಿ ರಾತ್ರಿ ಊಟಕ್ಕೆ ಏನಿರಬೇಕೆಂದು ಮತ ಚಲಾಯಿಸಿದಂತಿದೆ.

ಇಲ್ಲಿ ಜಾತಿಪದ್ಧತಿ ಇದೆ. ಸಂವಿಧಾನದಲ್ಲಿ ಸಮಾನತೆ, ಭ್ರಾತೃತ್ವಗಳನ್ನು ಮೂಲ ಆಶಯಗಳೆಂದು ಒಪ್ಪಿಕೊಂಡಿದ್ದರೂ ಈ ದುಷ್ಟ ಪದ್ಧತಿ ಅದನ್ನು ಭಗ್ನಗೊಳಿಸುತ್ತಿದೆ. ಯಾಕೆಂದರೆ ವಾಸ್ತವದಲ್ಲಿ ಚುನಾವಣೆ ಜಾತಿಗಳ ಆಧಾರದ ಮೇಲೆಯೆ ನಡೆಯುತ್ತದೆ. ಆದ್ದರಿಂದ ಪ್ರಜಾಪ್ರಭುತ್ವದ ಬುನಾದಿ ಎಂದು ಏನು ಕರೆಯುತ್ತೇವೆಯೋ– ‘ಚುನಾವಣೆ’ ಅದು ಸೋಲುತ್ತದೆ. ಇನ್ನು ಅದರ ಮೇಲೆ ಕಟ್ಟುವ ಸರ್ಕಾರದ ಸೌಧ ಹೇಗಿರುತ್ತದೆ? ಜಾತಿವಾರು ಪ್ರಾತಿನಿಧ್ಯದ ಸಂಪುಟ ರಚನೆ – ಹೀಗೆ ಅಸಮಾನತೆಯ ಮುಂದುವರಿಕೆಯಾಗುತ್ತದೆ. ಈ ಜಾತಿವಾರು ಮತಸಂಗ್ರಹಣ ಗ್ರಾಮಸಮಾಜದಿಂದ ಪ್ರಾರಂಭವಾಗಿ ದಿಲ್ಲಿಯಲ್ಲಿ ಸಂಚಯಿಸಿ ಅಧಿಕಾರ ಹಂಚಿಕೆಯಾದಮೇಲೆ ಅದೇ ಪ್ರಕಾರವಾಗಿ ಹಿಂದಿರುಗಿ ಗ್ರಾಮಪಂಚಾಯಿತಿಗೆ ಬಂದು ನಿಲ್ಲುತ್ತದೆ. ಪಾಶ್ಚಾತ್ಯರ ಕಣ್ಣಿನಲ್ಲಿ ಭಾರತ ಪ್ರಪಂಚದ ಬಹುದೊಡ್ಡ ಪ್ರಜಾಪ್ರಭುತ್ವ. ಅದು ಕೇವಲ ಹೊರಗಿನ ಕವಚವೆಂದೂ, ಒಳಗಿನ ಹೂರಣ ಬೇರೆಯೇ ಇದೆಯೆಂದು ಅವರಿಗೆ ತಿಳಿಯದೆನ್ನಲಾಗುವುದಿಲ್ಲ.

ಸಂಸದೀಯ ಪ್ರಜಾಪ್ರಭುತ್ವ ಪಾಶ್ಚಾತ್ಯ ಪರಿಕಲ್ಪನೆ. ಅಲ್ಲಿನ ಬಂಡವಾಳಶಾಹಿ ಶ್ರೀಮಂತ ರಾಷ್ಟ್ರಗಳಿಗೆ ಹೊಂದಿಕೆಯಾದೀತು. ಬಹುತೇಕ ಪೂರ್ವ ರಾಷ್ಟ್ರಗಳಿಗೆ ಅದು ಇನ್ನೂ ಅಪಥ್ಯವಾಗಿದೆ. ಬ್ರಿಟಿಷರ ಆಧಿಪತ್ಯಕ್ಕೆ ಹತ್ತಿರವಿದ್ದ ನೆಹರೂ ಪಂಥಕ್ಕೆ ಮತ್ತು ಮೇಲ್ಜಾತಿ ವ್ಯಾಪಾರೀ ವರ್ಗಕ್ಕೆ ಪ್ರಜಾಪ್ರಭುತ್ವದ ಮಾದರಿಯೇ ಆಪ್ಯಾಯಮಾನವಾಗಿ ಕಂಡಿತು. ಬಾಬಾಸಾಹೇಬರು ಸಂವಿಧಾನ ರಚನಾ ಕರಡು ಸಮಿತಿಯ ಅಧ್ಯಕ್ಷರಾಗಿ, ರಕ್ತಪಾತರಹಿತವಾದ ರಾಜಕೀಯ ಸ್ಥಿತ್ಯಂತರವನ್ನು ಬಯಸಿದ್ದರಿಂದ ಸಮಾನತೆ, ವ್ಯಕ್ತಿ ಸ್ವಾತಂತ್ರ್ಯದ ಅಡಿಗಲ್ಲಿನ ಮೇಲೆ ನಿಲ್ಲುವ ಪ್ರಜಾಪ್ರಭುತ್ವ ಮಾದರಿಯನ್ನೇ ಆಯ್ಕೆ ಮಾಡಿಕೊಂಡರು. ಆದರೂ ಸಂವಿಧಾನದಲ್ಲಿ ಆದಷ್ಟೂ ಸಮಾಜವಾದೀ ಲಕ್ಷಣಗಳನ್ನು ತುರುಕಲು ಹೆಣಗಾಡಿದರು. ಉದಾ: ಕೃಷಿ, ಕೈಗಾರಿಕೆ, ವಿಮೆ ಇತ್ಯಾದಿ ಕ್ಷೇತ್ರಗಳ ರಾಷ್ಟ್ರೀಕರಣ. ಆದರೆ ಅವುಗಳನ್ನು ಅನುಷ್ಠಾನಗೊಳಿಸಲು ಪಟ್ಟಭದ್ರರು ಬಿಟ್ಟಿಲ್ಲ.

ರಷಿಯಾ ದೇಶದಲ್ಲಿ ಕಮ್ಯುನಿಸಂ 1991 ರಲ್ಲಿ ಬಿದ್ದುಹೋಯಿತು. ಸ್ವಾತಂತ್ರ್ಯದ ಹೆಸರಿನಲ್ಲಿ ಅರಾಜಕತೆ ಸೃಷ್ಟಿಯಾಯಿತು. ಎಲ್ಲರಿಗೂ ಎಲ್ಲವೂ ಮುಕ್ತ ಎನ್ನುವ ಪರಿಸ್ಥಿತಿ ನಿರ್ಮಾಣವಾಯಿತು. ಅಪರಾಧಿಗಳ ಗುಂಪುಗಳು ಸ್ಥಳೀಯ ಸರ್ಕಾರಗಳನ್ನು ಅಪಹರಿಸಿದವು. ಜನರು ಮೂಲಭೂತ ಅವಶ್ಯಕತೆಗಳಿಗಾಗಿ ಪರದಾಡುವಂತಾಯಿತು. ಎರಡನೇ ಮಹಾಯುದ್ಧದ ಪಿಂಚಣಿದಾರ ಯೋಧರು ತಮ್ಮ ಪದಕಗಳನ್ನು ಮಾರಿ ಎರಡು ಲೋಫ್ ಬ್ರೆಡ್ ಕೊಳ್ಳಲು ಸರತಿಯಲ್ಲಿ ನಿಲ್ಲುತ್ತಿದ್ದರು. 1999 ರಲ್ಲಿ ವ್ಲಾಡಮೀರ್ ಪುಟಿನ್ ಅಧ್ಯಕ್ಷನಾಗಿ ಬಂದವನೆ, ನಮಗೆ ಇರಾಕ್ ಮಾದರಿಯ ಪ್ರಜಾಪ್ರಭುತ್ವ ಬೇಡ ಎಂದ. ನಮ್ಮ ನೆಲದ ಗುಣಕ್ಕೆ ಹೊಂದುವ ಸರ್ಕಾರ ಬೇಕಾಗಿದೆ ಎಂದ. ಆಗ ಒಬ್ಬ ವ್ಯಕ್ತಿಯ ಕನಿಷ್ಠ ವೇತನ ಎಂಬತ್ತು ಡಾಲರ್ ಇದ್ದದ್ದು ಈಗ ಆರುನೂರು ಡಾಲರ್ ಆಗಿದೆ. ಕೇವಲ ಎಂಟು ಮಿಲಿಯನ್ ಇದ್ದ ಮಧ್ಯಮ ವರ್ಗ ಈಗ 55 ಮಿಲಿಯನ್ ಆಗಿದೆ. ಬಡತನ ರೇಖೆ ಶೇ. 30 ರಿಂದ ಶೇ.14 ಕ್ಕೆ ಇಳಿದಿದೆ.

ಸಿಂಗಾಪುರವನ್ನು ಮಾದರಿ ರಾಜ್ಯವನ್ನಾಗಿ ಪರಿವರ್ತಿಸಿದ ಲೀ ಕ್ವಆನ್ ಸಹ ಪ್ರಜಾಪ್ರಭುತ್ವದ ಮಿತಿಗಳನ್ನು ತನ್ನ ಪ್ರಜೆಗಳಿಗೆ ಮನವರಿಕೆ ಮಾಡಿಕೊಡುವುದರ ಮೂಲಕ ಯಶಸ್ಸು ಗಳಿಸಿದ. ಬಹು ಪಕ್ಷೀಯ ಚುನಾವಣೆ ಮತಗಳನ್ನು ವಿಭಜಿಸುತ್ತದೆ. ಅಂತಿಮವಾಗಿ ಮಿಕ್ಕವರಿಗಿಂತ ಕೊಂಚ ಹೆಚ್ಚು ಮತ ಗಳಿಸಬಲ್ಲ ಒಬ್ಬ ಚೋರನೂ ಅಧಿಕಾರ ಹಿಡಿಯುತ್ತಾನೆ ಎಂಬುದು ಅವನ ಅಭಿಪ್ರಾಯವಾಗಿತ್ತು. ಅದನ್ನು ಒಳಸಂಚಿನ ರಾಜಕಾರಣ (**kleptocracy**) ಎನ್ನುತ್ತಾರೆ. ಈಗ ಅಂತಹುದೇ ಪರಿಸ್ಥಿತಿ ಭಾರತದಲ್ಲಿದೆ. ಆದ್ದರಿಂದ ಭಾರತದ ನೆಲದ ಗುಣಕ್ಕೆ ಹೊಂದುವ ಅಂದರೆ ಜಾತಿಪದ್ಧತಿಗೆ ಸೆಡ್ಡು ಹೊಡೆದು ನಿಲ್ಲುವ ಪ್ರಜಾಪ್ರಭತ್ವದ ಮಾದರಿಯೊಂದು ತುರ್ತಾಗಿ ಬೇಕಾಗಿದೆ. ಇತ್ತೀಚೆಗೆ ಅಮೆರಿಕದ ’ದಿ ಇಕನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್’ ಒಂದು ಸರ್ವೇಕ್ಷಣೆ ನಡೆಸಿ ಪ್ರಪಂಚದ ಒಟ್ಟು ದೇಶಗಳಲ್ಲಿ ಶೇ.50 ರಷ್ಟು ಪ್ರಜಾಪ್ರಭುತ್ವ ಆಡಳಿತವನ್ನು ಹೊಂದಿದ್ದರೂ ಪೂರ್ಣಪ್ರಮಾಣದ ಪ್ರಜಾಪ್ರಭುತ್ವವು ಕೇವಲ 19 ದೇಶಗಳಲ್ಲಿದೆ ಎಂದು ಹೇಳಿದೆ. ಅಂದರೆ ಶೇ. 4.5 ರಷ್ಟು. ಈ ಬಾರಿ ಅಮೆರಿಕಾ ದೇಶವು ತನ್ನ ನಾಯಕನ ಮೇಲೆ ನಂಬಿಕೆಯನ್ನು ಕಳೆದುಕೊಂಡಿರುವುದರಿಂದ ದೋಷಯುಕ್ತ ಪ್ರಜಾಪ್ರಭುತ್ವ (**flawed democracy**) ಎಂದು ಕರೆಸಿಕೊಂಡಿದೆ. ಆದ್ದರಿಂದ ನನ್ನ ಪ್ರಕಾರ ಭಾರತಕ್ಕೆ ಪ್ರಜಾಪ್ರಭುತ್ವ ಹೇಗಿದೆ ಎಂದರೆ ಭಾರತಾಂಬೆಯ ಪಾದಗಳಿಗೆ ಅಳತೆ ಮೀರಿದ ಚಪ್ಪಲಿಗಳನ್ನು ತೊಡಿಸಿ ನಡೆಸಿದ ಹಾಗಿದೆ! ಆಕೆ ನಡೆಯಲೂ ಆಗದೆ, ಓಡಲೂ ಆಗದೆ ತೆವಳುತ್ತಿರುವುದು ಕಾಣುತ್ತಿದೆ.

■ **ಮೂಚಿ**

## ಮಾತೇ ಮುತ್ತು

★ ನಾನು ನಿಧಾನಕ್ಕೆ ನಡೆಯುತ್ತೇನೆ. ಆದರೆ ಯಾವತ್ತೂ ಹಿಮ್ಮುಖವಾಗಿ ನಡೆಯುವುದಿಲ್ಲ.

—ಅಬ್ರಹಾಂ ಲಿಂಕನ್

★ ಮೊದಲು ಅವರು ನಿಮ್ಮನ್ನು ನಿರ್ಲಕ್ಷಿಸುತ್ತಾರೆ. ಬಳಿಕ ಅವರು ನಿಮ್ಮನ್ನು ನೋಡಿ ನಗುತ್ತಾರೆ. ಆ ಬಳಿಕ ಅವರು ನಿಮ್ಮ ವಿರುದ್ಧ ಹೋರಾಡುತ್ತಾರೆ. ಕೊನೆಗೆ ನೀವು ಗೆಲ್ಲುತ್ತೀರಿ.

—ಮಹಾತ್ಮ ಗಾಂಧಿ

★ ಮೂರ್ಖರು ಮತ್ತು ಮತಾಂಧರು ತಮ್ಮ ಗುರಿಯ ಬಗ್ಗೆ ಖಚಿತವಾಗಿರುತ್ತಾರೆ. ಬುದ್ಧಿವಂತರು ಗೊಂದಲದಲ್ಲಿ ಇರುತ್ತಾರೆ. ಅದೇ ಜಗತ್ತಿನ ದೊಡ್ಡ ಸಮಸ್ಯೆ.

—ಬರ್ಟ್ರೆಂಡ್ ರಸೆಲ್

★ ನಾವು ಏನನ್ನು ನೋಡುತ್ತೇವೆ ಎನ್ನುವುದು ಏನನ್ನು ನೋಡಬಯಸುತ್ತೇವೆ ಎನ್ನುವುದರ ಮೇಲೆ ನಿಂತಿದೆ.

—ಜಾನ್ ಲುಬ್ಬಕ್

★ ಏನೋ ಹೇಳಲಿಕ್ಕಿದೆ ಎಂದು ಬುದ್ಧಿವಂತರು ಮಾತನಾಡುತ್ತಾರೆ. ಏನನ್ನಾದರೂ ಹೇಳೋಣ ಎಂದು ದಡ್ಡರು ಮಾತನಾಡುತ್ತಾರೆ.

—ಪ್ಲೇಟೋ

★ ಜ್ಞಾನಕ್ಕಿಂತ ಕಲ್ಪನೆ ಮುಖ್ಯ. ಜ್ಞಾನಕ್ಕೆ ಮಿತಿ ಇದೆ. ಕಲ್ಪನೆ ಇಡೀ ಜಗತ್ತನ್ನು ಸುತ್ತು ಹೊಡೆಯುತ್ತದೆ.

—ಆಲ್ಬರ್ಟ್ ಐನ್‌ಸ್ಟೀನ್

★ ಪಡೆಯುವ ಕೊಯ್ಲಿನಿಂದ ದಿನವನ್ನು ಅಳೆಯಬೇಡಿ. ಪ್ರತಿದಿನವೂ ಬಿತ್ತುವ ಬೀಜದಿಂದ ಅಳೆಯಿರಿ.

—ರಾಬರ್ಟ್ ಸ್ಟಿವನ್‌ಸನ್

★ ವಾಸ್ತವದಿಂದ ನೀವು ತಪ್ಪಿಸಿಕೊಳ್ಳಬಹುದು. ಆದರೆ ವಾಸ್ತವದ ಪರಿಣಾಮಗಳಿಂದ ತಪ್ಪಿಸಿಕೊಳ್ಳಲಾಗದು.

—ಐನ್ ರ್‍ಯಾಂಡ್

★ ನಿಮಗೆ ಯುದ್ಧದಲ್ಲಿ ಆಸಕ್ತಿ ಇಲ್ಲದಿರಬಹುದು. ಆದರೆ ಯುದ್ಧಕ್ಕೆ ನಿಮ್ಮ ಬಗ್ಗೆ ಆಸಕ್ತಿ ಇದೆ.

—ಲಿಯೊನ್ ಟ್ರಾಟ್‌ಸ್ಕಿ